ಯೋಜನೆಯ ಮುಖ್ಯ ಕಾಲುವೆಗೆ ಅವಶ್ಯಕವಾದ ಅರಣ್ಯ ಪ್ರದೇಶವನ್ನು ಆ ಇಲಾಖೆಯಿಂದ ಪಡೆದು ಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಉಡಿಕೇರಿ ಗ್ರಾಮದಲ್ಲಿ ಸಮುದಾಯ ಭವನ

552 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಉಡಿಕೇರಿ ಗ್ರಾಮದಲ್ಲಿ ಪುನರ್ವಸತಿ ಫಂಡಿನಿಂದ ಸಮುದಾಯ ಭವನ ಕಟ್ಟಲು ಸರಕಾರಿ ಆದೇಶ ನೀಡಿರುವ ವಿಷಯ ನಿಜವೇ;*

ಆ) *ಸರಕಾರಿ ಆದೇಶದ ಪ್ರಕಾರ ಸಮುದಾಯ ಭವನ ಕಟ್ಟಲು ಸಹಾಯಕ ಕಾರ್ಯಕಾರಿ ಅಭಿಯಂತರು ಏತ ನೀರಾವರಿ ಉಪ-ವಿಭಾಗ ನಂ.5 ಬೈಲಹೊಂಗಲ ಇವರು ಸರಕಾರದ ಮುಖ್ಯ ವಾಸ್ತುಶಿಲ್ಪಿಗಳು ಬೆಂಗಳೂರು ಇವರಿಂದ ನಕಾಶೆ ಮಾಡಿಸಿರುವ ವಿಷಯ ನಿಜವೇ;*

ಇ) *ಸರಕಾರಿ ಆದೇಶದ ಅನ್ವಯ ಈ ಕೆಲಸಕ್ಕೆ ಅಂದಾಜು ವೆಚ್ಚ ಪತ್ರಿಕೆ ತಯಾರಿಸಿದ ವಿಷಯ ನಿಜವೇ?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಪುನರ್ವಸತಿ ಕೇಂದ್ರಗಳಲ್ಲಿ ಮಾತ್ರ ಸಮುದಾಯ ಭವನ ಮತ್ತು ಇನ್ನಿತರ ಅನುಮೋದಿತ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಅವಕಾಶ ಇದೆ. ಆದರೆ ಉಡಕೇರಿ ಗ್ರಾಮವು ಪುನರ್ವಸತಿ ಕೇಂದ್ರವಾಗಿರದ ಕಾರಣ ಅಲ್ಲಿ ಸಮುದಾಯ ಭವನದ ಕೆಲಸವನ್ನು ಕೈಗೊಂಡಿಲ್ಲ.

ಆ) ಹೌದು.

ಇ) (ಅ) ದಲ್ಲಿ ತಿಳಿಸಿರುವ ಕಾರಣ ಪ್ರಶ್ನೆ ಉದ್ಭವಿಸುವುದಿಲ್ಲ.

ಮಳೆಯಿಂದ ಹಾಳಾದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ಕುರಿತು

546-ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾರಿ ಮಳೆಯಿಂದ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳು ಹಾಳಾಗಿರುವುದು ನಿಜವೆ ಹಾಗಿದ್ದಲ್ಲಿ ಅವು ಯಾವುವು?*

ಆ) *ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣವನ್ನು ಈತನಕ ಮಂಜೂರು ಮಾಡಿದೆ.*

ಇ) *ಹಾಗೂ ರಸ್ತೆ ದುರಸ್ತಿ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈ ಸಾಲಿನ ಅತಿವೃಷ್ಟಿಯಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 322.64 ಕಿಮೀ. ಉದ್ದದ ರಸ್ತೆಗಳಿಗೆ, 33 ಅಡ್ಡ ಮೋರಿಗಳಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ಕೆಲವು ಭಾಗಗಳಿಗೆ ಹಾನಿ ಉಂಟಾಗಿದೆ.

ಆ) ಲೋಕೋಪಯೋಗಿ ಇಲಾಖೆ ರಸ್ತೆಗಳ ತುರ್ತು ದುರಸ್ತಿಗಾಗಿ ಈ ತನಕ 12.00 ಲಕ್ಷ ರೂ.ಗಳು ಮಂಜೂರು ಆಗಿದೆ.

ಇ) ತುರ್ತು ದುರಸ್ತಿಗಳನ್ನು ಮಾಡಿದ್ದು, ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ. ಶಾಶ್ವತ ದುರಸ್ತಿ ಕಾಮಗಾರಿಗಳನ್ನು ಅತಿವೃಷ್ಟಿ ಪರಿಹಾರ ನಿಧಿಯಿಂದ ಬೇಡಿಕೆ ಕೋರಿದ್ದು ಅನುದಾನ ದೊರೆತ ನಂತರ ಮಾಡಲಾಗುವುದು.